ದೂರವಾಣಿ:7022254997/ 6361532058
Wedsite: www.kuvempu.ac.in
E-mail: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಯು.ಜಿ–2/ 3308 /2020–21

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ–577451
ದಿನಾಂಕ: 24/08/2020.

## ಸುತ್ತೋಲೆ

ವಿಷಯ : 2019–20ನೇ ಸಾಲಿನ ಸ್ನಾತಕ ಪದವಿಗಳ ಲಿಖಿತ ಮತ್ತು ಪ್ರಾಯೋಗಿಕ (*Double the Duration* ಸೇರಿದಂತೆ) ಪರೀಕ್ಷೆಗಳನ್ನು ನಡೆಸುವ ಕುರಿತು.

ಉಲ್ಲೇಖ: 01.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಇಡಿ/197/ಯುಎನ್ಇ/2020, ದಿನಾಂಕ:04.08.2020.

02.ಕುಲಸಚಿವರು, ಶೈಕ್ಷಣಿಕ ವಿಭಾಗ ಇವರ ಅಧಿಸೂಚನೆ ಸಂಖ್ಯೆ:ಕುವಿ:ಎಸಿ–3 ವೇಳಾಪಟ್ಟಿ:ಯುಜಿ:1361/2020–21, ದಿನಾಂಕ:20.08.2020.

*****

ರಾಜ್ಯಾದ್ಯಾಂತ ವ್ಯಾಪಿಸಿರುವ ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಪದವಿ ಕಾಲೇಜುಗಳಲ್ಲಿ ನಡೆಸಬೇಕಾದ ಸ್ನಾತಕ ಪದವಿಗಳ ಲಿಖಿತ/ಪ್ರಾಯೋಗಿಕ ಪರೀಕ್ಷೆಗಳನ್ನು ಮುಂದೂಡಲಾಗಿತ್ತು. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಉಲ್ಲೇಖಿತ ಪತ್ರದನ್ವಯ, ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ನ Freshers ವಿದ್ಯಾರ್ಥಿಗಳಿಗೆ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದ್ದು, ಆರನೇ ಸೆಮಿಸ್ಟರ್ ಹಾಗೂ ಒಂದನೇ ಸೆಮಿಸ್ಟರ್‌ನಿಂದ ಐದನೇ ಸೆಮಿಸ್ಟರ್‌ನ ಮರುಯತ್ನದ(Repeaters) ವಿದ್ಯಾರ್ಥಿಗಳಿಗೆ ಮಾತ್ರ **ಸೆಪ್ಟಂಬರ್–2020ರ** ಮಾಹೆಯಲ್ಲಿ, ಯುಜಿಸಿ ಹಾಗೂ ಸರ್ಕಾರದ ಮಾರ್ಗಸೂಚಿಗಳನ್ವಯ ಪರೀಕ್ಷಾ ಕೇಂದ್ರಗಳಲ್ಲಿ ಕೋವಿಡ್–19 ರೋಗ ಹರಡದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಂಡು ಪರೀಕ್ಷೆಗಳನ್ನು ನಡೆಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯ ವ್ಯಾಪ್ತಿಯ ಸ್ನಾತಕ ಪದವಿಗಳ **ಲಿಖಿತ ಪರೀಕ್ಷೆಗಳು ದಿನಾಂಕ:14–09–2020**ರಿಂದ ಪ್ರಾರಂಭವಾಗಲಿದ್ದು, ಈ ಲಿಖಿತ ಪರೀಕ್ಷೆಗಳ ಪೂರ್ವದಲ್ಲಿಯೇ ಪ್ರಾಯೋಗಿಕ ಪರೀಕ್ಷೆಗಳನ್ನು ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಹಾಗೂ ಪ್ರಾಯೋಗಿಕ ಪರೀಕ್ಷಾ ಕೋ–ಆರ್ಡಿನೇಟರುಗಳಿಗೆ ಸೂಚಿಸಲಾಗಿದೆ.

ಪದವಿ ಪರೀಕ್ಷೆಗಳ ವೇಳಾಪಟ್ಟಿಯನ್ನು ಈಗಾಗಲೇ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಸದರಿ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ. ಕೋವಿಡ್–19 ಸಾಂಕ್ರಾಮಿಕ ರೋಗ ಹರಡದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದೆ.

Kannan 24/08/20
(ಪ್ರೊ. ಪಿ.ಕಣ್ಣನ್)
ಕುಲಸಚಿವರು(ಪರೀಕ್ಷಾಂಗ)
ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ

ಗೆ,

ಕುವೆಂಪು ವಿಶ್ವವಿದ್ಯಾನಿಲಯದ ಶಿವಮೊಗ್ಗ / ಚಿಕ್ಕಮಗಳೂರು/ದಾವಣಗೆರೆ/ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

<u>ಪ್ರತಿ:</u>

1. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ವಿದ್ಯಾನಗರ, ಶಿವಮೊಗ್ಗ.
3. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
4. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
5. ಅಧೀಕ್ಷಕರು, ಪರೀಕ್ಷಾ ವಿಭಾಗ ಹಾಗೂ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
6. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
7. ನಿರ್ದೇಶಕರು, UCCF ಕಛೇರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ಕಛೇರಿ ಪ್ರತಿ.